ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 30-35
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭೋವಿ ಸಮುದಾಯದ ಜೀವನ ಸಂಸ್ಕಾರಗಳು

**ಡಾ. ಪ್ರವೀಣ ಕುಮಾರ ಬಿ**
ಉಪನ್ಯಾಸಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

**Abstract:**
*ಭೋವಿ ಸಮುದಾಯವು ಕರ್ನಾಟಕದ ಪ್ರಮುಖ ಸಮುದಾಯಗಳಲ್ಲಿ ಒಂದಾಗಿದ್ದು, ತನ್ನದೇ ಆದ ವಿಶಿಷ್ಟ ಜೀವನ ಸಂಸ್ಕಾರಗಳನ್ನು ಇಂದಿಗೂ ಸಂರಕ್ಷಿಸಿಕೊಂಡಿದೆ. ಈ ಲೇಖನವು ಭೋವಿ ಸಮುದಾಯದ ಜನನ, ನಾಮಕರಣ, ವಿವಾಹ, ಮರಣ ಹಾಗೂ ಇತರೆ ಜೀವನಚಕ್ರಕ್ಕೆ ಸಂಬಂಧಿಸಿದ ಸಂಸ್ಕಾರಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ಸಮುದಾಯದ ಆಚರಣೆಗಳು, ಸಂಪ್ರದಾಯಗಳು ಮತ್ತು ಧಾರ್ಮಿಕ ನಂಬಿಕೆಗಳು ಅವರ ಸಾಮಾಜಿಕ ಜೀವನವನ್ನು ಹೇಗೆ ರೂಪಿಸಿವೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಆಧುನೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಸಂಸ್ಕಾರಗಳಲ್ಲಿ ಕಂಡುಬಂದ ಬದಲಾವಣೆಗಳನ್ನೂ ಪರಿಶೀಲಿಸಲಾಗಿದೆ. ಕುಟುಂಬ, ಬಂಧುತ್ವ ಮತ್ತು ಸಮುದಾಯದ ಒಗ್ಗಟ್ಟನ್ನು ಬಲಪಡಿಸುವಲ್ಲಿ ಈ ಸಂಸ್ಕಾರಗಳ ಪಾತ್ರವನ್ನು ಲೇಖನವು ಒತ್ತಿಹೇಳುತ್ತದೆ. ಭೋವಿ ಸಮುದಾಯದ ಸಾಂಸ್ಕೃತಿಕ ಪರಂಪರೆಯನ್ನು ದಾಖಲಿಸಿ, ಸಂರಕ್ಷಿಸುವ ಅಗತ್ಯತೆಯನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ. ಜನಪದ ಮತ್ತು ಸಮಾಜಶಾಸ್ತ್ರೀಯ ಅಧ್ಯಯನಗಳಿಗೆ ಈ ಲೇಖನವು ಮಹತ್ವದ ಕೊಡುಗೆಯನ್ನು ನೀಡುತ್ತದೆ.*

**Keywords:** *ಭೋವಿ ಸಮುದಾಯ, ಜೀವನ ಸಂಸ್ಕಾರಗಳು, ಜನಪದ ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳು, ಸಾಮಾಜಿಕ ಜೀವನ*

## ಪೀಠಿಕೆ

ಭೋವಿ ಸಮುದಾಯವು ತನ್ನದೇ ಆದ ವಿಶಿಷ್ಟ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಪುರಾತನ ಕಾಲದಿಂದಲೂ ಈ ಸಮುದಾಯದವರು ಶ್ರಮಜೀವಿಗಳಾಗಿ, ಸಮಾಜದ ಅಗತ್ಯಗಳನ್ನು ಪೂರೈಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಇತರರ ಸೇವೆಯನ್ನೇ ಜೀವನಾಧಾರವಾಗಿಸಿಕೊಂಡು, ಅಲೆಮಾರಿ ಜೀವನವನ್ನು ನಡೆಸುತ್ತಾ ಬಿಸಿಲು, ಮಳೆ, ಗಾಳಿ ಎನ್ನದೆ ಶ್ರಮದ ಸಾಧನಗಳಾದ ಹಾರೆ, ಗುದ್ದಲಿ, ಉಳಿ, ಸುತ್ತಿಗೆ ಮುಂತಾದ ಉಪಕರಣಗಳನ್ನು ಹಿಡಿದು ಕುಟುಂಬ ಸಮೇತರಾಗಿ ವಿವಿಧ ಪ್ರದೇಶಗಳಿಗೆ ತೆರಳಿ ತಮ್ಮ ವೃತ್ತಿಯನ್ನು ನಿರ್ವಹಿಸುತ್ತಿದ್ದರು.

ಕೆರೆಗಳ ನಿರ್ಮಾಣ, ಬಾವಿಗಳನ್ನು ತೋಡುವುದು, ರಸ್ತೆಗಳನ್ನು ನಿರ್ಮಿಸುವುದು, ಕಟ್ಟಡಗಳಿಗೆ ಬುನಾದಿ ತೆಗೆಯುವುದು, ಮನೆಗಳು ಹಾಗೂ ದೇವಾಲಯಗಳನ್ನು ನಿರ್ಮಿಸುವುದು, ಜೊತೆಗೆ ಬೀಸುವ ಕಲ್ಲು, ಒಲ್ಲು ಕಲ್ಲು ಹಾಗೂ ಇತರೆ ಕಲ್ಲಿನ ಉಪಕರಣಗಳನ್ನು ತಯಾರಿಸುವುದು ಇವರ ಪ್ರಮುಖ ಸಾಂಪ್ರದಾಯಿಕ ವೃತ್ತಿಗಳಾಗಿವೆ. ಗುಡ್ಡಗಾಡು ಪ್ರದೇಶಗಳಲ್ಲಿ ಶ್ರಮಪಟ್ಟು ಕಟ್ಟಡ ನಿರ್ಮಾಣಕ್ಕೆ

***Please cite this article as:*** ಪ್ರವೀಣ ಕುಮಾರ, ಬಿ. (2026). ಭೋವಿ ಸಮುದಾಯದ ಜೀವನ ಸಂಸ್ಕಾರಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 30–35

ಅಗತ್ಯವಿರುವ ವಿವಿಧ ಗಾತ್ರದ ಕಲ್ಲುಗಳನ್ನು ಕತ್ತರಿಸಿ, ಜನರ ಬೇಡಿಕೆಗೆ ಅನುಗುಣವಾಗಿ ಪೂರೈಸುವ ಕಾರ್ಯದಲ್ಲಿಯೂ ಇವರು ಪರಿಣತಿಯನ್ನು ಹೊಂದಿದ್ದಾರೆ. ಇತಿಹಾಸದಲ್ಲಿ ಕೋಟೆ–ಕೊತ್ತಲುಗಳು, ದೇವಾಲಯಗಳು ಹಾಗೂ ಅಣೆಕಟ್ಟುಗಳ ನಿರ್ಮಾಣ ಕಾರ್ಯಗಳಲ್ಲಿ ಭೋವಿ ಸಮುದಾಯದ ಕೊಡುಗೆ ಗಮನಾರ್ಹವಾಗಿದ್ದು, ಅವರ ಶ್ರಮ ಮತ್ತು ಕೌಶಲ್ಯವು ಸ್ಮರಣೀಯವಾಗಿದೆ.

ಇತರೆ ಸಮುದಾಯಗಳಂತೆ ಭೋವಿ ಸಮುದಾಯದಲ್ಲಿಯೂ ಜೀವನ ಸಂಸ್ಕಾರಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಜನನದಿಂದ ಮರಣದವರೆಗೆ ಜೀವನದ ಪ್ರತಿಯೊಂದು ಹಂತದಲ್ಲೂ ವಿವಿಧ ಸಂಸ್ಕಾರಗಳನ್ನು ಆಚರಿಸಲಾಗುತ್ತದೆ. ಈ ಸಂಸ್ಕಾರಗಳ ಹಿಂದೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಅಂಶಗಳು ಅಡಗಿದ್ದು, ಅವು ಸಮುದಾಯದ ಜೀವನಶೈಲಿ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ, ಭೋವಿ ಸಮುದಾಯದ ಜೀವನ ಸಂಸ್ಕಾರಗಳಲ್ಲಿರುವ ವೈಜ್ಞಾನಿಕತೆ, ಸಾಮಾಜಿಕ ಪ್ರಾಮುಖ್ಯತೆ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಪರಿಚಯಿಸುವ ಒಂದು ವಿನಮ್ರ ಪ್ರಯತ್ನವೇ ಈ ಅಧ್ಯಯನವಾಗಿದೆ.

**ಜನನ ಮತ್ತು ನಾಮಕರಣ ಸಂಸ್ಕಾರ**

ಭೋವಿ ಸಮುದಾಯದಲ್ಲಿ ಮಗುವಿನ ಜನನವನ್ನು ಅತ್ಯಂತ ಶುಭಕರ ಹಾಗೂ ಸಂತೋಷದಾಯಕ ಘಟನೆಯೆಂದು ಪರಿಗಣಿಸಲಾಗುತ್ತದೆ. ಮಗು ಜನಿಸಿದ ತಕ್ಷಣ ಬಂಧು–ಬಳಗದವರಿಗೆ ಈ ಶುಭ ಸುದ್ದಿಯನ್ನು ತಿಳಿಸಿ ಸಂಭ್ರಮದಿಂದ ಆಚರಿಸುವ ಸಂಪ್ರದಾಯವಿದೆ. ಗರ್ಭಧಾರಣೆಯ ಒಂಬತ್ತನೇ ತಿಂಗಳಿನಲ್ಲಿ ಹೆರಿಗೆ ನೋವು ಕಾಣಿಸಿಕೊಂಡಾಗ ಅನುಭವಿ ಮಹಿಳೆಯರು ಗರ್ಭಿಣಿಗೆ ಧೈರ್ಯ ತುಂಬಿ, ಸಾಂತ್ವನ ಹೇಳುತ್ತಾ ಹೆರಿಗೆಗೆ ನೆರವಾಗುತ್ತಾರೆ.

ಹಿಂದಿನ ದಿನಗಳಲ್ಲಿ ಭೋವಿ ಸಮುದಾಯದ ಮಹಿಳೆಯರು ದುಡಿಮೆಯಲ್ಲಿದ್ದಾಗಲೇ ಹೆರಿಗೆ ಹೊಂದುವುದು ಸಾಮಾನ್ಯವಾಗಿತ್ತು. ಅಂತಹ ಸಂದರ್ಭಗಳಲ್ಲಿ ಸಮೀಪದಲ್ಲಿದ್ದ ಮಹಿಳೆಯರು ಮರದ ನೆರಳಿನಲ್ಲಿ ಅಥವಾ ದೊಡ್ಡ ಬಂಡೆಯ ಮರೆಯಲ್ಲಿ ಹೆರಿಗೆ ಮಾಡಿಸುತ್ತಿದ್ದರು. ಪ್ರಕೃತಿಯ ಮಡಿಲೇ ಅವರ ಪ್ರಸೂತಿಗೃಹವಾಗಿದ್ದು, ಹೆರಿಗೆಯಾದ ಬಳಿಕ ತಾಯಿ ಮತ್ತು ಮಗುವಿನ ಆರೈಕೆಗೆ ವಿಶೇಷ ಗಮನ ನೀಡಲಾಗುತ್ತಿತ್ತು. ನವಜಾತ ಶಿಶುವನ್ನು ತಾಯಿಯಿಂದ ಬೇರ್ಪಡಿಸಿದ ನಂತರ ಬಾಣಂತಿಯ ಹೊಟ್ಟೆಗೆ ಬಟ್ಟೆ ಕಟ್ಟುವುದು ಹಾಗೂ ತಲೆಗೆ ಬಿಸಿಯಾದ ಬಟ್ಟೆಯನ್ನು ಸುತ್ತುವುದು ರೂಢಿಯಾಗಿದೆ. ನಂತರ ತಾಯಿ ಮತ್ತು ಮಗುವಿಗೆ ಪ್ರತ್ಯೇಕವಾಗಿ ಸ್ನಾನ ಮಾಡಿಸಿ, ನೆಲ್ಲುಹುಲ್ಲಿನಿಂದ ತಯಾರಿಸಿದ ಹಾಸಿಗೆಯ ಮೇಲೆ ವಿಶ್ರಾಂತಿ ಪಡೆಯಲು ವ್ಯವಸ್ಥೆ ಮಾಡುತ್ತಾರೆ.

ಬಾಣಂತಿಯ ಸ್ನಾನದ ನೀರನ್ನು ದುಷ್ಟಶಕ್ತಿಗಳು ಅಥವಾ ದುಷ್ಟ ವ್ಯಕ್ತಿಗಳು ದಾಟಿದರೆ ಎದೆಹಾಲು ಕಡಿಮೆಯಾಗುತ್ತದೆ ಎಂಬ ನಂಬಿಕೆ ಸಮುದಾಯದಲ್ಲಿದೆ. ಆದ್ದರಿಂದ ಸ್ನಾನದ ನೀರು ಹರಿದು ಹೋಗದಂತೆ ಗುಂಡಿಯನ್ನು ತೋಡಿ ಅದರಲ್ಲಿ ನೀರನ್ನು ಹೀರಿಕೊಳ್ಳುವಂತೆ ಮಾಡುತ್ತಾರೆ. ಮಗುವಿನ ಹೊಕ್ಕಳಬಳ್ಳಿಯನ್ನು ಕತ್ತರಿಸಿದ ಬಳಿಕ ಅದನ್ನು ಸುರಕ್ಷಿತವಾಗಿ ನೆಲದಲ್ಲಿ ಹೂಳುತ್ತಾರೆ. ಹೊಕ್ಕಳಬಳ್ಳಿಯನ್ನು ನಾಯಿ ಅಥವಾ ಕಾಗೆಗಳು ತಿಂದರೆ ತಾಯಿ–ಮಗುವಿಗೆ ಅಪಶಕುನ ಉಂಟಾಗುತ್ತದೆ ಎಂಬ ನಂಬಿಕೆಯೂ ಇದೆ. ಮಗುವಿಗೆ ದೃಷ್ಟಿ ತಾಗದಂತೆ ಪೊರಕೆ ಕಡ್ಡಿಯಿಂದ ದೃಷ್ಟಿ ತೆಗೆದು, ಸುಟ್ಟ ಬೂದಿಯನ್ನು ತಾಯಿ ಮತ್ತು ಮಗುವಿನ ಹಣೆಗೆ ಹಚ್ಚುವ ಸಂಪ್ರದಾಯವನ್ನು ಪಾಲಿಸುತ್ತಾರೆ.

ಬಾಣಂತಿಗೆ ಸುಮಾರು ಒಂದು ತಿಂಗಳವರೆಗೆ ಉಪ್ಪು ಕಡಿಮೆ ಇರುವ ಆಹಾರ, ಅನ್ನ, ತಿಳಿಸಾರು, ಮೃದುವಾದ ಮುದ್ದೆ ಹಾಗೂ ಮೆಂತೆ ಮಿಶ್ರಿತ

ಆಹಾರವನ್ನು ನೀಡುತ್ತಾರೆ. ಮೂರು ತಿಂಗಳವರೆಗೆ ತಣ್ಣೀರು ಮುಟ್ಟದಂತೆ ನಿರ್ಬಂಧ ವಿಧಿಸಲಾಗುತ್ತದೆ. ಮಗುವಿಗೆ ಸ್ನಾನ ಮಾಡಿಸಿದ ನಂತರ ಅರಿಶಿನ, ಸಾಂಬ್ರಾಣಿ ಮತ್ತು ಗಂಧದ ಪುಡಿಯನ್ನು ಕೆಂಡದ ಮೇಲೆ ಹಾಕಿ ಬರುವ ಹೊಗೆಯನ್ನು ಮಗುವಿಗೂ ಹಾಗೂ ಬಾಣಂತಿಗೂ ತಾಗಿಸುತ್ತಾರೆ. ಇದರಿಂದ ಕ್ರಿಮಿಕೀಟಗಳು ದೂರವಾಗಿ ಆರೋಗ್ಯ ಕಾಪಾಡುತ್ತದೆ ಎಂಬ ನಂಬಿಕೆ ಇದೆ. ಅಲ್ಲದೆ ಗಿಡಮೂಲಿಕೆಗಳ ಹೊಗೆಯನ್ನು ತಲೆಗೆ ತಾಗಿಸುವ ಪದ್ಧತಿಯೂ ರೂಢಿಯಲ್ಲಿದೆ.

ಬಾಣಂತಿಯ ಆರೋಗ್ಯವರ್ಧನೆಗಾಗಿ ಕೋಳಿ, ಮೀನು ಹಾಗೂ ಕುರಿಮಾಂಸದ ಸಾರನ್ನು ಆಹಾರವಾಗಿ ನೀಡುತ್ತಾರೆ. ಕೆಲವು ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ಕಾರದ ಆಹಾರದೊಂದಿಗೆ ಸ್ವಲ್ಪ ಪ್ರಮಾಣದ ಸರಾಯಿಯನ್ನು ನೀಡುವ ಪದ್ಧತಿಯೂ ಕಂಡುಬರುತ್ತದೆ. ಇದರಿಂದ ಶೀತ ಮತ್ತು ಕೆಮ್ಮು ಬರುವುದಿಲ್ಲ ಎಂಬ ಜನಪದ ನಂಬಿಕೆ ಪ್ರಚಲಿತದಲ್ಲಿದೆ.

ಭೋವಿ ಸಮುದಾಯದಲ್ಲಿ ಮಂಗಳವಾರ ಮತ್ತು ಶುಕ್ರವಾರ ಮಗುವಿನ ಜನನವು ಶುಭವೆಂದು ಪರಿಗಣಿಸಲಾಗುತ್ತದೆ. ಬುಧವಾರ ಜನಿಸಿದ ಮಗು ಕುಟುಂಬದ ಸಂಕಷ್ಟಗಳನ್ನು ನಿವಾರಿಸುತ್ತದೆ ಎಂಬ ನಂಬಿಕೆಯೂ ಇದೆ. ಮಗುವಿಗೆ ಜ್ವರ, ಭೇದಿ, ವಾಂತಿ ಮೊದಲಾದ ಅನಾರೋಗ್ಯ ಉಂಟಾದರೆ ಕೆಲವರು ವೈದ್ಯಕೀಯ ಚಿಕಿತ್ಸೆಯ ಜೊತೆಗೆ ಅಥವಾ ಅದರ ಬದಲಾಗಿ ಬಾಲಗ್ರಹದೋಷ ನಿವಾರಣೆಗೆ ತಾಯಿತ ಕಟ್ಟಿಸುವುದು, ಅರಳೆಣ್ಣೆಯ ದೀಪದಲ್ಲಿ ಕಾಯಿಸಿದ ನಾಣ್ಯದಿಂದ ಬರೆ ಹಾಕುವುದು, ಕುಲದೇವರಿಗೆ ಹರಕೆ ಸಲ್ಲಿಸುವುದು ಹಾಗೂ ಅಮಾವಾಸ್ಯೆಯಂದು ದೃಷ್ಟಿ ತೆಗೆಯುವಂತಹ ಸಂಪ್ರದಾಯಗಳನ್ನು ಅನುಸರಿಸುತ್ತಾರೆ.

ಭೋವಿ ಸಮುದಾಯದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಜನನಕ್ಕೆ ಸಮಾನ ಪ್ರಾಶಸ್ತ್ಯ ನೀಡಲಾಗುತ್ತದೆ. ಆದಾಗ್ಯೂ, ಕೆಲವು ಕುಟುಂಬಗಳಲ್ಲಿ ಗಂಡು ಮಗುವಿನ ಜನನಕ್ಕೆ ಹೆಚ್ಚಿನ ಸಂಭ್ರಮ ವ್ಯಕ್ತಪಡಿಸುವುದು ಕಂಡುಬರುತ್ತದೆ. ಮಗುವಿನ ಜನನದ ಮೂರನೇ ದಿನ ಜ್ಯೋತಿಷ್ಯರ ಬಳಿ ಹೋಗಿ ಜನ್ಮನಕ್ಷತ್ರ, ರಾಶಿ, ಗಣ ಹಾಗೂ ಕುಂಡಲಿಯನ್ನು ಪರಿಶೀಲಿಸುವ ಸಂಪ್ರದಾಯವೂ ಇದೆ.

**ನಾಮಕರಣ ಸಂಸ್ಕಾರ**

ಭೋವಿ ಸಮುದಾಯದಲ್ಲಿ ನಾಮಕರಣವು ಮಗುವಿನ ಜೀವನದ ಅತ್ಯಂತ ಪ್ರಮುಖ ಸಂಸ್ಕಾರಗಳಲ್ಲಿ ಒಂದಾಗಿದೆ. ಸಮುದಾಯದ ನಂಬಿಕೆಯಂತೆ ಮನುಷ್ಯನು ಹುಟ್ಟಿನಿಂದ ಮರಣದವರೆಗೆ ಆಚರಿಸುವ ಸಂಸ್ಕಾರಗಳಲ್ಲಿ ನಾಮಕರಣಕ್ಕೆ ವಿಶೇಷ ಸ್ಥಾನವಿದೆ. ಕೆಲವು ಕುಟುಂಬಗಳು ಸೂತಕ ಮುಗಿದ ನಂತರ ನಾಮಕರಣವನ್ನು ನೆರವೇರಿಸಿದರೆ, ಇನ್ನು ಕೆಲವು ಕುಟುಂಬಗಳು ಸೂತಕ ಮತ್ತು ನಾಮಕರಣ ಸಂಸ್ಕಾರಗಳನ್ನು ಒಂದೇ ದಿನ ಆಚರಿಸುತ್ತಾರೆ. ಆದಾಗ್ಯೂ, ಹೆಚ್ಚಿನ ಕುಟುಂಬಗಳು ಸೂತಕದ ದಿನಗಳಲ್ಲಿಯೇ ನಾಮಕರಣವನ್ನು ನೆರವೇರಿಸುವ ಪದ್ಧತಿಯನ್ನು ಅನುಸರಿಸುತ್ತಾರೆ.

ಸಾಮಾನ್ಯವಾಗಿ ಮಗುವಿನ ತಂದೆಯು ಜ್ಯೋತಿಷ್ಯರ ಬಳಿ ಹೋಗಿ ಮಗುವಿನ ನಕ್ಷತ್ರ, ರಾಶಿ, ಜನ್ಮಕುಂಡಲಿ ಹಾಗೂ ಗಣ ಮೊದಲಾದ ಜ್ಯೋತಿಷ್ಯ ಅಂಶಗಳ ಆಧಾರದ ಮೇಲೆ ಹೆಸರನ್ನು ನಿಗದಿಪಡಿಸಿಕೊಂಡು ಬರುತ್ತಾರೆ. ಇದನ್ನು ಜನ್ಮನಾಮ ಎಂದು ಕರೆಯಲಾಗುತ್ತದೆ. ಮಗುವಿಗೆ ಪೂರ್ವಜರು, ಕುಟುಂಬದ ಹಿರಿಯರು ಅಥವಾ ಕುಲದೇವರ ಹೆಸರನ್ನು ಇಡುವುದು ಸಾಂಪ್ರದಾಯಿಕ ಪದ್ಧತಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ನಾಗರಿಕತೆ ಹಾಗೂ ಆಧುನಿಕತೆಯ ಪ್ರಭಾವದಿಂದ ಸಾಂಪ್ರದಾಯಿಕ ಹೆಸರುಗಳ ಜೊತೆಗೆ ಆಧುನಿಕ ಹೆಸರುಗಳನ್ನು ಇಡುವ ಪ್ರವೃತ್ತಿಯೂ ಹೆಚ್ಚಾಗಿದೆ. ನಾಮಕರಣ ಸಮಾರಂಭದ ನಿಮಿತ್ತ ಆಹ್ವಾನ ಪತ್ರಿಕೆಗಳನ್ನು ಹಂಚಿ

ಬಂಧು–ಬಳಗದವರನ್ನು ಆಹ್ವಾನಿಸಲಾಗುತ್ತದೆ. ಸಮಾರಂಭದ ದಿನ ಗೋಮೂತ್ರ ಮತ್ತು ಸಗಣಿಯಿಂದ ಮನೆಯನ್ನು ಶುಚಿಗೊಳಿಸಿ, ರಂಗೋಲಿ ಹಾಕಿ, ತೊಟ್ಟಿಲನ್ನು ಹೂಗಳಿಂದ ಅಲಂಕರಿಸಲಾಗುತ್ತದೆ. ಮನೆದೇವರು, ಕುಲದೇವರು ಹಾಗೂ ಗುರು–ಹಿರಿಯರಿಗೆ ಪೂಜೆ ಸಲ್ಲಿಸಿ, ಮಗುವಿಗೆ ಹೊಸ ಬಟ್ಟೆ ತೊಡಿಸಿ, ದೃಷ್ಟಿ ನಿವಾರಣೆಗಾಗಿ ಕಾಡಿಗೆ (ಕಾಜಲ್) ಹಚ್ಚಿ, ಕೈಗೆ ಕರಿಮಣಿ ಸರವನ್ನು ಧರಿಸಲಾಗುತ್ತದೆ. ಇವು ನಾಮಕರಣ ಸಂಸ್ಕಾರದಲ್ಲಿ ಪಾಲಿಸಲಾಗುವ ಪ್ರಮುಖ ಆಚರಣೆಗಳಾಗಿವೆ.

ನಾಮಕರಣದ ಸಂದರ್ಭದಲ್ಲಿ ಸೋದರಮಾವ ಹಾಗೂ ಅತ್ತೆಯರು ಮಗುವಿನ ಕಿವಿಯಲ್ಲಿ ಹೆಸರನ್ನು ಮೂರು ಬಾರಿ ಉಚ್ಚರಿಸುತ್ತಾರೆ. ನಂತರ ಸೋದರ ಅತ್ತೆಯು ಮಗುವನ್ನು ತೊಟ್ಟಿಲಿನಿಂದ ಎತ್ತಿಕೊಂಡು ಮುದ್ದಾಡಿ, ಕುಲದೇವತೆ ಅಥವಾ ಪೂರ್ವಜರ ಹೆಸರನ್ನು ಸ್ಮರಿಸಿ ಪುನಃ ತೊಟ್ಟಿಲಿನಲ್ಲಿ ಮಲಗಿಸುವ ಮೂಲಕ ನಾಮಕರಣ ಸಂಸ್ಕಾರವನ್ನು ಪೂರ್ಣಗೊಳಿಸುತ್ತಾರೆ.

ನಾಮಕರಣದ ದಿನ ಮನೆಗೆ ಆಗಮಿಸಿದ ಅತಿಥಿಗಳಿಗೆ ಸಿಹಿ ಮತ್ತು ಭೋಜನವನ್ನು ಏರ್ಪಡಿಸಲಾಗುತ್ತದೆ. ಮುತ್ತೈದೆಯರಿಗೆ ಹೂವು, ಹಣ್ಣು, ಅಡಿಕೆ, ಅರಿಶಿಣ ಹಾಗೂ ಕುಂಕುಮವನ್ನು ನೀಡಿ ಗೌರವಿಸಲಾಗುತ್ತದೆ. ಬಂಧು–ಬಳಗದವರು ಮಗುವನ್ನು ಆಶೀರ್ವದಿಸಿ, ಹೂಗಳಿಂದ ಅಲಂಕರಿಸಿದ ತೊಟ್ಟಿಲಿನ ಬಳಿ ಜೇನುತುಪ್ಪ ಮತ್ತು ಹಾಲಿನ ಮಿಶ್ರಣವನ್ನು ಮಗುವಿನ ನಾಲಿಗೆಗೆ ಸ್ಪರ್ಶಿಸುವ ಸಂಪ್ರದಾಯವಿದೆ.

ಕಲ್ಲು ಭೋವಿ (ವಡ್ಡ) ಸಮುದಾಯದಲ್ಲಿ ನಾಮಕರಣದ ದಿನ ಗಂಗಾಪೂಜೆಯನ್ನು ವಿಶೇಷವಾಗಿ ನೆರವೇರಿಸಲಾಗುತ್ತದೆ. ಗಂಗಮ್ಮನನ್ನು ಸ್ಮರಿಸಿ ಪೂಜೆ ಸಲ್ಲಿಸುವುದರಿಂದ ಮನೆಯ ಸೂತಕ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಸಮುದಾಯದ ಹಿರಿಯರು ದೇವರ ಪ್ರಾರ್ಥನೆ ಸಲ್ಲಿಸಿ ಮಗುವಿಗೆ ದೇವರ ಹೆಸರನ್ನು ಇಡುವ ಸಂಪ್ರದಾಯವನ್ನು ಅನುಸರಿಸುತ್ತಾರೆ. ಇದರಿಂದ ಮಗುವಿನ ಆಯಸ್ಸು, ಆರೋಗ್ಯ ಹಾಗೂ ಶುಭಭಾಗ್ಯ ವೃದ್ಧಿಯಾಗುತ್ತದೆ ಎಂಬುದು ಅವರ ಅಚಲವಾದ ವಿಶ್ವಾಸವಾಗಿದೆ.

**ವಿವಾಹ**

ವಿವಾಹವು ಮಾನವ ಸಮಾಜದ ಅತ್ಯಂತ ಪ್ರಾಚೀನ, ಸಾರ್ವತ್ರಿಕ ಹಾಗೂ ಅನಿವಾರ್ಯವಾದ ಸಾಮಾಜಿಕ ಸಂಸ್ಥೆಗಳಲ್ಲಿ ಒಂದಾಗಿದೆ. ಸ್ತ್ರೀ ಮತ್ತು ಪುರುಷರ ನಡುವಿನ ಸಾಮಾಜಿಕವಾಗಿ ಮಾನ್ಯತೆ ಪಡೆದ ಸಂಬಂಧವನ್ನು ಸ್ಥಾಪಿಸುವುದು, ಕುಟುಂಬ ವ್ಯವಸ್ಥೆಯನ್ನು ರೂಪಿಸುವುದು ಹಾಗೂ ಮಾನವ ವಂಶವನ್ನು ಮುಂದುವರಿಸುವುದು ವಿವಾಹದ ಪ್ರಮುಖ ಉದ್ದೇಶಗಳಾಗಿವೆ. ವಿಶ್ವದ ಎಲ್ಲಾ ಸಮಾಜಗಳಲ್ಲಿ ವಿವಾಹ ಸಂಸ್ಥೆ ವಿಭಿನ್ನ ರೂಪಗಳಲ್ಲಿ ಕಂಡುಬರುತ್ತದೆ. ಏಕಪತ್ನಿತ್ವ, ಬಹುಪತ್ನಿತ್ವ ಮತ್ತು ಇತರ ವೈವಾಹಿಕ ಪದ್ಧತಿಗಳು ವಿವಿಧ ಸಂಸ್ಕೃತಿಗಳಲ್ಲಿ ಪ್ರಚಲಿತದಲ್ಲಿವೆ. ಸಮಾಜಶಾಸ್ತ್ರೀಯ ದೃಷ್ಟಿಯಿಂದ ವಿವಾಹವು ಕೇವಲ ವೈಯಕ್ತಿಕ ಸಂಬಂಧವಲ್ಲ; ಅದು ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಂಸ್ಥೆಯಾಗಿದೆ.

ಭಾರತದಂತಹ ಸಾಂಪ್ರದಾಯಿಕ ರಾಷ್ಟ್ರದಲ್ಲಿ ವಿವಾಹಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ನೀಡಲಾಗಿದೆ. ಪಾಶ್ಚಾತ್ಯ ಸಮಾಜಗಳಲ್ಲಿ ವಿವಾಹವನ್ನು ನಾಗರಿಕ ಒಪ್ಪಂದವೆಂದು ಪರಿಗಣಿಸುವ ಪ್ರವೃತ್ತಿ ಕಂಡುಬಂದರೆ, ಭಾರತೀಯ ಸಮಾಜದಲ್ಲಿ ಅದನ್ನು ಪವಿತ್ರ ಧಾರ್ಮಿಕ ಸಂಸ್ಕಾರವೆಂದು ಸ್ವೀಕರಿಸಲಾಗುತ್ತದೆ. ಹಿಂದೂ ಸಮಾಜದ ವಿವಿಧ ಜಾತಿ ಹಾಗೂ ಉಪಜಾತಿಗಳಂತೆ ಭೋವಿ ಸಮುದಾಯದಲ್ಲಿಯೂ ವಿವಾಹವು ಜೀವನದ ಪ್ರಮುಖ ಸಂಸ್ಕಾರವೆಂದು ಪರಿಗಣಿಸಲ್ಪಡುತ್ತದೆ. ಸಮುದಾಯದ ಸಾಮಾಜಿಕ ರಚನೆ, ಸಾಂಸ್ಕೃತಿಕ ನಂಬಿಕೆಗಳು ಮತ್ತು

ಸಂಪ್ರದಾಯಗಳಿಗೆ ಅನುಗುಣವಾಗಿ ವಿಶಿಷ್ಟವಾದ ವೈವಾಹಿಕ ಪದ್ಧತಿಗಳು ಇಂದಿಗೂ ಆಚರಣೆಯಲ್ಲಿವೆ.

ಭೋವಿ ಸಮುದಾಯದಲ್ಲಿ ವಿವಾಹ ಸಂಸ್ಕಾರಕ್ಕೆ ವಿಶೇಷ ಪ್ರಾಧಾನ್ಯತೆ ನೀಡಲಾಗುತ್ತದೆ. ಸಮುದಾಯದಲ್ಲಿ ಅನೇಕ ಒಳಪಂಗಡಗಳು, ಗೋತ್ರಗಳು ಹಾಗೂ ಬೆಡಗುಗಳು (ಕುಲಶಾಖೆಗಳು) ಅಸ್ತಿತ್ವದಲ್ಲಿದ್ದು, ಒಂದೇ ಗೋತ್ರ ಅಥವಾ ಒಂದೇ ಬೆಡಗಿಗೆ ಸೇರಿದವರ ನಡುವೆ ವಿವಾಹವನ್ನು ನಿಷೇಧಿಸಲಾಗಿದೆ. ಒಂದೇ ಗೋತ್ರದವರು ಪರಸ್ಪರ ಸಹೋದರ–ಸಹೋದರಿಯರ ಸಮಾನರೆಂದು ಪರಿಗಣಿಸುವ ಕಾರಣ, ವಿವಾಹವು ಭಿನ್ನ ಗೋತ್ರ ಮತ್ತು ಭಿನ್ನ ಬೆಡಗಿನವರ ನಡುವೆ ಮಾತ್ರ ನಡೆಯುತ್ತದೆ. ಈ ಪದ್ಧತಿಯು ರಕ್ತಸಂಬಂಧದ ವಿವಾಹವನ್ನು ತಡೆಯುವ ಉದ್ದೇಶವನ್ನು ಹೊಂದಿದೆ.

ವಿವಾಹಕ್ಕೆ ವಧು–ವರರ ಆಯ್ಕೆಯ ಸಂದರ್ಭದಲ್ಲಿ ಸಮುದಾಯದ ಹಿರಿಯರು ಪ್ರಮುಖ ಪಾತ್ರವಹಿಸುತ್ತಾರೆ. ವಧು ಮತ್ತು ವರರ ರಾಶಿ, ನಕ್ಷತ್ರ, ಜನ್ಮಕುಂಡಲಿ ಹಾಗೂ ಹಸ್ತರೇಖೆ ಮೊದಲಾದ ಜ್ಯೋತಿಷ್ಯ ಅಂಶಗಳನ್ನು ಪರಿಶೀಲಿಸಿ ವಿವಾಹಕ್ಕೆ ಅನುಮೋದನೆ ನೀಡುತ್ತಾರೆ. ಜೊತೆಗೆ ಕುಟುಂಬದ ಹಿನ್ನೆಲೆ, ಸಂಸ್ಕಾರ, ನಡತೆ ಹಾಗೂ ಸಾಮಾಜಿಕ ಗೌರವಕ್ಕೂ ಮಹತ್ವ ನೀಡಲಾಗುತ್ತದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿದ ನಂತರವೇ ವಿವಾಹ ಸಂಬಂಧವನ್ನು ಅಂತಿಮಗೊಳಿಸುವ ಸಂಪ್ರದಾಯ ಭೋವಿ ಸಮುದಾಯದಲ್ಲಿ ಇಂದಿಗೂ ಮುಂದುವರಿದಿದೆ.

**ಮರಣ ಸಂಸ್ಕಾರ**

ಭೋವಿ ಸಮುದಾಯದಲ್ಲಿ ಮರಣವನ್ನು ಜೀವನದ ಅಂತಿಮ ಹಾಗೂ ಅನಿವಾರ್ಯ ಸಂಸ್ಕಾರವೆಂದು ಪರಿಗಣಿಸಲಾಗುತ್ತದೆ. ಇದು ಕೇವಲ ವೈಯಕ್ತಿಕ ನಷ್ಟವಲ್ಲದೆ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಯಾಗಿ ಮಹತ್ವ ಪಡೆದಿದೆ. ಮರಣ ಸಂಭವಿಸಿದ ನಂತರ ಕುಟುಂಬದ ಸದಸ್ಯರು, ಬಂಧು–ಬಳಗ ಹಾಗೂ ಸಮುದಾಯದವರು ಒಟ್ಟಾಗಿ ಸೇರಿ ಅಂತ್ಯಕ್ರಿಯೆ ಮತ್ತು ನಂತರದ ಸಂಸ್ಕಾರಗಳನ್ನು ಸಂಪ್ರದಾಯಬದ್ಧವಾಗಿ ನೆರವೇರಿಸುತ್ತಾರೆ. ಈ ಆಚರಣೆಗಳಲ್ಲಿ ಪ್ರದೇಶಾನುಸಾರ ಕೆಲವು ವ್ಯತ್ಯಾಸಗಳು ಕಂಡುಬಂದರೂ, ಮೂಲಭೂತ ಸಂಪ್ರದಾಯಗಳು ಬಹುತೇಕ ಒಂದೇ ರೀತಿಯಾಗಿರುತ್ತವೆ.

ಮೊದಲ ಹಂತದಲ್ಲಿ ಮೃತದೇಹವನ್ನು ಶುಚಿಗೊಳಿಸಿ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸಲಾಗುತ್ತದೆ. ಕೆಲವೆಡೆ ಮೃತದೇಹವನ್ನು ಹೂಗಳಿಂದ ಅಲಂಕರಿಸಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ನಂತರ ಕುಟುಂಬದ ಸದಸ್ಯರು, ಬಂಧುಗಳು ಹಾಗೂ ನೆರೆಹೊರೆಯವರು ಮೃತ ವ್ಯಕ್ತಿಗೆ ಅಂತಿಮ ಗೌರವ ಸಲ್ಲಿಸುತ್ತಾರೆ. ಶೋಕಾಚರಣೆಯ ಸಂದರ್ಭದಲ್ಲಿ ಮಹಿಳೆಯರು ಅಳುವ ಮೂಲಕ ತಮ್ಮ ದುಃಖವನ್ನು ವ್ಯಕ್ತಪಡಿಸುವುದು ಸಾಮಾನ್ಯವಾಗಿ ಕಂಡುಬರುವ ಸಂಪ್ರದಾಯವಾಗಿದೆ.

ಭೋವಿ ಸಮುದಾಯದಲ್ಲಿ ಸಾಮಾನ್ಯವಾಗಿ ಮೃತದೇಹವನ್ನು ದಹನ ಮಾಡುವ ಪದ್ಧತಿ ಹೆಚ್ಚಾಗಿ ರೂಢಿಯಲ್ಲಿದೆ. ಚಿತೆಗೆ ಅಗ್ನಿ ನೀಡುವ ಜವಾಬ್ದಾರಿಯನ್ನು ಕುಟುಂಬದ ಹಿರಿಯ ಮಗ ಅಥವಾ ಸಮೀಪದ ಪುರುಷ ಬಂಧು ನಿರ್ವಹಿಸುತ್ತಾನೆ. ಆದರೆ ಕೆಲವು ಪ್ರದೇಶಗಳಲ್ಲಿ ಹಾಗೂ ಕೆಲವು ಉಪಪಂಗಡಗಳಲ್ಲಿ ಮೃತದೇಹವನ್ನು ಸಮಾಧಿ ಮಾಡುವ ಪದ್ಧತಿಯೂ ಕಂಡುಬರುತ್ತದೆ. ಅಂತ್ಯಕ್ರಿಯೆಯ ನಂತರ ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಕುಟುಂಬದವರು ಮತ್ತು ಬಂಧುಗಳು ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸುತ್ತಾರೆ. ಈ ಸಂಸ್ಕಾರಗಳು ಭೋವಿ ಸಮುದಾಯದ ಧಾರ್ಮಿಕ ನಂಬಿಕೆಗಳು, ಸಾಮಾಜಿಕ ಐಕ್ಯತೆ ಹಾಗೂ ಪೂರ್ವಜರ ಆರಾಧನೆಯ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ.

**ಧಾರ್ಮಿಕ ವಿಧಿಗಳು ಮತ್ತು ನಂತರದ ಸಂಸ್ಕಾರಗಳು**

***ಧಾರ್ಮಿಕ ವಿಧಿಗಳು***

ಅಂತ್ಯಕ್ರಿಯೆಯ ನಂತರ ಸಮುದಾಯದ ಪೂಜಾರಿ ಅಥವಾ ಕುಟುಂಬದ ಹಿರಿಯರ ಮಾರ್ಗದರ್ಶನದಲ್ಲಿ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಂತ್ರಪಠಣ, ಪೂಜೆ, ಪಿಂಡಪ್ರದಾನ ಹಾಗೂ ಮೃತಾತ್ಮದ ಸದ್ಗತಿಗಾಗಿ ಪ್ರಾರ್ಥನೆ ಮಾಡುವ ಸಂಪ್ರದಾಯವಿದೆ. ಈ ಆಚರಣೆಗಳು ಮೃತರ ಆತ್ಮಕ್ಕೆ ಶಾಂತಿ ದೊರೆಯಲಿ ಎಂಬ ನಂಬಿಕೆಯೊಂದಿಗೆ ನಡೆಸಲ್ಪಡುತ್ತವೆ.

***ಮೂರನೇ, ಹತ್ತನೇ ಮತ್ತು ಹನ್ನೊಂದನೇ ದಿನದ ವಿಧಿಗಳು***

ಭೋವಿ ಸಮುದಾಯದಲ್ಲಿ ಮರಣಾನಂತರ ಮೂರನೇ ದಿನ, ಹತ್ತನೇ ದಿನ ಅಥವಾ ಹನ್ನೊಂದನೇ ದಿನ ವಿಶೇಷ ಧಾರ್ಮಿಕ ವಿಧಿಗಳನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮೃತಾತ್ಮದ ಶಾಂತಿಗಾಗಿ ಪೂಜೆ ಸಲ್ಲಿಸಿ, ಪಿಂಡಪ್ರದಾನ, ತರ್ಪಣ ಹಾಗೂ ಇತರೆ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸುತ್ತಾರೆ. ಬಂಧು–ಬಳಗ ಮತ್ತು ಸಮುದಾಯದವರಿಗೆ ಊಟದ ವ್ಯವಸ್ಥೆ ಮಾಡಿ, ಪ್ರಸಾದವನ್ನು ವಿತರಿಸುವ ಸಂಪ್ರದಾಯವೂ ಇದೆ.

***ಸಾಮಾಜಿಕ ಸಹಕಾರ***

ಮರಣ ಸಂಭವಿಸಿದ ಸಂದರ್ಭದಲ್ಲಿ ಭೋವಿ ಸಮುದಾಯದವರು ದುಃಖಿತ ಕುಟುಂಬದೊಂದಿಗೆ ನಿಂತು ಅವರಿಗೆ ಸಾಂತ್ವನ ಹೇಳುವುದು, ಅಂತ್ಯಕ್ರಿಯೆಯ ವ್ಯವಸ್ಥೆಯಲ್ಲಿ ಸಹಕರಿಸುವುದು ಹಾಗೂ ಅಗತ್ಯವಿದ್ದಲ್ಲಿ ಆರ್ಥಿಕ ಮತ್ತು ಮಾನಸಿಕ ನೆರವು ನೀಡುವುದು ಪ್ರಮುಖ ಸಾಮಾಜಿಕ ಕರ್ತವ್ಯವೆಂದು ಪರಿಗಣಿಸುತ್ತಾರೆ. ಈ ಸಹಕಾರ ಮನೋಭಾವವು ಸಮುದಾಯದ ಐಕ್ಯತೆ ಮತ್ತು ಪರಸ್ಪರ ಸಹಬಾಳ್ವೆಯನ್ನು ಬಲಪಡಿಸುತ್ತದೆ.

ಒಟ್ಟಾರೆಯಾಗಿ, ಭೋವಿ ಸಮುದಾಯದ ಮರಣ ಸಂಸ್ಕಾರಗಳು ಧಾರ್ಮಿಕ ನಂಬಿಕೆಗಳು, ಪೂರ್ವಜರ ಆರಾಧನೆ, ಸಾಮಾಜಿಕ ಹೊಣೆಗಾರಿಕೆ ಹಾಗೂ ಸಮುದಾಯದ ಐಕ್ಯತೆಯನ್ನು ಪ್ರತಿಬಿಂಬಿಸುತ್ತವೆ. ಈ ಸಂಸ್ಕಾರಗಳ ಮೂಲಕ ಮೃತರಿಗೆ ಗೌರವ ಸಲ್ಲಿಸುವುದರ ಜೊತೆಗೆ ಕುಟುಂಬ ಮತ್ತು ಸಮುದಾಯದ ಸದಸ್ಯರ ನಡುವಿನ ಬಾಂಧವ್ಯವೂ ಮತ್ತಷ್ಟು ಗಟ್ಟಿಯಾಗುತ್ತದೆ..

**ಪರಾಮರ್ಶನ ಗ್ರಂಥಗಳು**


- ದೇವೇಂದ್ರಪ್ಪ ಎಚ್. (2016). *ಭೋವಿ ಸಮುದಾಯದ ಆರ್ಥಿಕತೆ.* (ಎಂ.ಫಿಲ್ ನಿಬಂಧ). ಕನ್ನಡ ವಿಶ್ವವಿದ್ಯಾಲಯ.
- ಗಂಗಾಧರಯ್ಯ. (2002). ಭೋವಿ ಸಮಾಜದ ಸಂಸ್ಕೃತಿ ಹಾಗೂ ಕೊಡೆಗೆಗಳು.
- ಮೇತ್ರಿ ಕೆ.ಎಂ. (2000). *ಬುಡಕಟ್ಟು ಕುಲಕಸಬುಗಳು.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಮುಜುಮದಾರ ಡಿ.ಎನ್. (1944). *ರೇಸಸ್ ಅ್ಯಂಡ್ ಕ್ಯಾಸ್ಟ್ ಕಲ್ಚರ್ಸ್ ಆಫ್ ಇಂಡಿಯಾ.* ಯೂನಿವರ್ಸಲ್ ಪಬ್ಲಿಕೇಷನ್.
- ಸಂಗಳದ, ಎನ್.ಬಿ. (2014). ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ.